ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 20-05-1971.

***ವಿಧಾತಾ, ವರದಾತಾತನದ ಸ್ಥಿತಿ*** (विधाता, वरदाता-पन की स्टेज)

ವಿಧಾತಾ ಮತ್ತು ವರದಾತಾ - ಈ ಎರಡೂ ಗುಣಗಳನ್ನು ನಿಮ್ಮಲ್ಲಿ ಅನುಭವ ಮಾಡುತ್ತೀರಾ? ಯಾವ ರೀತಿ ತಂದೆ ವಿಧಾತ ಆಗಿದ್ದಾರೆ ಮತ್ತು ವರದಾತಾ ಸಹ ಆಗಿದ್ದಾರೆ, ಅದೇ ರೀತಿ ನಿಮ್ಮನ್ನೂ ಸಹ ಎರಡೂ ಪ್ರಾಪ್ತಿ ಸ್ವರೂಪ ಎಂದು ತಿಳಿಯುತ್ತೀರಾ? ಎಷ್ಟೆಷ್ಟು ವರದಾತಾ ಆಗುತ್ತೀರೋ ಅಷ್ಟು ವರದಾನ ಕೊಡುವ ಶಕ್ತಿಯು ಹೆಚ್ಚುತ್ತದೆ. ಹೀಗೆ ಎರಡರ ಅನುಭವ ಮಾಡುತ್ತೀರಾ ಅಥವಾ ಈಗ ಕೇವಲ ವಿಧಾತನ ಪಾತ್ರ ನಡೆಯುತ್ತಿದೆಯೇ, ಅಂತ್ಯದಲ್ಲಿ ವರದಾತಾನ ಪಾತ್ರ ಇರುತ್ತದೆಯೇ? ಏನು ತಿಳಿಯುತ್ತೀರಿ? (ಕೆಲವರು ಎರಡೂ ಪಾತ್ರ ನಡೆಯುತ್ತಿದೆ, ಕೆಲವರು ಈಗ ಒಂದು ಪಾತ್ರ ನಡೆಯುತ್ತಿದೆ ಎಂದು ಹೇಳಿದರು) ವರದಾನ ಯಾವ ಆತ್ಮರಿಗೆ ಕೊಡುತ್ತೀರಿ ಮತ್ತು ವರದಾತಾ ಯಾರಿಗಾಗಿ ಆಗುತ್ತೀರಿ? ಒಂದಾಗಿದೆ ಜ್ಞಾನ ಕೊಡುವುದು, ಇನ್ನೊಂದು ವರದಾನದ ರೂಪದಲ್ಲಿ ಕೊಡುವುದು. ಹಾಗಾದರೆ ವಿಧಾತಾ ಆಗಿರುವಿರೋ ಅಥವಾ ವರದಾತಾ ಆಗಿರುವಿರೋ? ಯಾರಿಗೆ ವರದಾನ ಕೊಡುತ್ತೀರಿ? ವಿಧಾತಾ ಅರ್ಥಾತ್ ಜ್ಞಾನ ಕೊಡುವವರಂತೂ ಆಗುತ್ತೀರಿ, ಆದರೆ ವಿಧಾತಾ ಆಗುವುದರ ಜೊತೆಗೆ ವರದಾತಾ ಸಹ ಕೆಲವು ಬಾರಿ ಆಗಬೇಕಾಗುತ್ತದೆ. ಯಾವಾಗ? ಯಾವಾಗ ಯಾವುದಾದರೂ ಆತ್ಮ ಸಾಹಸಹೀನ, ನಿರ್ಬಲ ಆಗಿರುತ್ತಾರೆ. ಆದರೆ ನಾವು ಏನಾದರೂ ಪ್ರಾಪ್ತಿ ಪಡೆಯಬೇಕೆನ್ನುವ ಇಚ್ಛುಕರಾಗಿರುತ್ತಾರೆ. ಇಂತಹ ಆತ್ಮರ ಪ್ರತಿ ಜ್ಞಾನ ದಾತಾ ಆಗುವುದರ ಜೊತೆ ನೀವು ವಿಶೇಷ ರೂಪದಲ್ಲಿ ಆ ಆತ್ಮಕ್ಕೆ ಬಲ ಕೊಡಲು ಶುಭ ಭಾವನೆ ಇಟ್ಟುಕೊಳ್ಳುತ್ತೀರಿ ಅಥವಾ ಶುಭ ಚಿಂತಕರಾಗುತ್ತೀರಿ. ಹೀಗೆ ವಿಧಾತಾನ ಜೊತೆ ವರದಾತಾ ಸಹ ಆಗುತ್ತೀರಿ. ಹೆಚ್ಚಿನ ಬಲವನ್ನು ನಿಮ್ಮ ಕಡೆಯಿಂದ ವರದಾನದ ರೂಪದಲ್ಲಿ ಕೊಡುತ್ತೀರಿ. ಆದ್ದರಿಂದ ವರದಾನವನ್ನೂ ಕೊಡಬೇಕಾಗುವುದು ಮತ್ತು ದಾತಾ ಸಹ ಆಗಬೇಕಾಗುವುದು. ಆದ್ದರಿಂದ ಎರಡೂ ಆಗಿರುವಿರಿ. ಇಂತಹ ಅನುಭವ ಯಾವಾಗಲಾದರೂ ಮಾಡಿರುವಿರಾ? ಭಕ್ತಿ ಮಾರ್ಗದಲ್ಲಿ ಸಾಕ್ಷಾತ್ಕಾರದ ಮೂಲಕ ವರದಾನದ ಪ್ರಾಪ್ತಿ ಆಗುತ್ತದೆ ಏಕೆಂದರೆ ಆ ಆತ್ಮರು ಎಷ್ಟು ದುರ್ಬಲ ಇರುತ್ತಾರೆಂದರೆ ಜ್ಞಾನ ಧಾರಣೆ ಮಾಡಲು ಸಾಧ್ಯವಾಗುವುದಿಲ್ಲ ಸ್ವಯಂ ಪುರುಷಾರ್ಥಿ ಆಗುವುದಿಲ್ಲ. ಆದ್ದರಿಂದ ವರದಾನದ ಇಚ್ಛೆ ಇಟ್ಟುಕೊಳ್ಳುತ್ತಾರೆ, ಮತ್ತು ವರದಾನದ ರೂಪದಲ್ಲಿ ಅವರಿಗೆ ಒಂದಿಲ್ಲ ಒಂದು ಪ್ರಾಪ್ತಿ ಆಗುತ್ತದೆ. ಅದೇ ರೀತಿ ದುರ್ಬಲ ಆತ್ಮರು ನಿಮ್ಮ ಮುಂದೆ ಬರುತ್ತಾರೆ, ಅವರನ್ನು ನೋಡಿದಾಗ ಕರುಣೆಯ, ದಯೆಯ ಭಾವನೆ ಬರುತ್ತದೆ. ದಯಾ ಹೃದಯಿ ಆಗಿ ನಿಮ್ಮ ಎಲ್ಲಾ ಶಕ್ತಿಯ ಸಹಾಯವನ್ನು ಕೊಟ್ಟು ಅವರನ್ನು ಮೇಲಕ್ಕೆತ್ತಬೇಕು. ಇದಾಗಿದೆ ವರದಾನದ ರೂಪ. ಈಗ ಹೇಳಿರಿ ಎರಡು ಆಗಿರುವಿರೋ ಅಥವಾ ಒಂದೋ? ಕೆಲವು ಆತ್ಮರ ಪ್ರತಿ ನೀವು ವಿಶೇಷ ಕಾರ್ಯಕ್ರಮವನ್ನೂ ಇಡಬೇಕಾಗುವುದು, ಏಕೆಂದರೆ ತಮ್ಮ ಶಕ್ತಿಯಿಂದ ಅವರು ಧಾರಣೆ ಮಾಡಲು ಆಗುವುದಿಲ್ಲ. ಆದ್ದರಿಂದ ಶಕ್ತಿಯ ವರದಾನ ಕೊಡುವ ಶಿವ- ಶಕ್ತಿಯರಾಗಿರುವಿರಿ. ಆದ್ದರಿಂದ ಜ್ಞಾನದ ವಿಧಾತಾತನದ ಸೇವೆ ಹೆಚ್ಚು ನಡೆಯುವುದು ಎಂದು ತಿಳಿಸಲಾಗಿತ್ತು. ಅಂತ್ಯದಲ್ಲಿ ಜ್ಞಾನ ಹೇಳುವ ಸೇವೆ ಕಡಿಮೆ ಆಗುತ್ತದೆ, ವರದಾನ ಕೊಡುವ ಸೇವೆ ಹೆಚ್ಚು ಇರುತ್ತದೆ. ಆದ್ದರಿಂದ ಅಂತಿಮ ಸಮಯದಲ್ಲಿ ವರದಾನ ತೆಗೆದುಕೊಳ್ಳುವ ಆತ್ಮರಲ್ಲಿ ಅದೇ ಸಂಸ್ಕಾರ ಪ್ರಕಟ ಆಗುವುದು ಮತ್ತು ಗುಪ್ತ ಆಗಿರುವ ಅದೇ ಸಂಸ್ಕಾರ ದ್ವಾಪರದಲ್ಲಿ ಭಕ್ತರ ರೂಪದಲ್ಲಿ ಪ್ರಕಟ ಆಗುವುದು. ಈಗ ಜ್ಞಾನ ಅರ್ಥಾತ್ ಜ್ಞಾನ ದಾತನ ಸೇವೆ ಇದೆ, ನಂತರ ವರದಾತನ ಸೇವೆ ಇರುವುದು. ತಿಳಿಯಿತೆ? ಆಗ ಇಷ್ಟು ಸಮಯವೇ ಇರುವುದಿಲ್ಲ ಮತ್ತು ಆತ್ಮರಲ್ಲಿ ಇಷ್ಟು ಶಕ್ತಿಯೂ ಇರುವುದಿಲ್ಲ. ಆದ್ದರಿಂದ ವರದಾತಾ ಆಗಿ ವರದಾನ ಕೊಡುವ ಸೇವೆ ಇರುವುದು. ಈಗ ಈ ಸೇವೆ ಕಡಿಮೆ ಮಾಡುತ್ತೀರಿ, ನಂತರ ಹೆಚ್ಚು ಮಾಡಬೇಕಾಗುವುದು. ಈಗ ವಾರಸುದಾರರನ್ನು ಮಾಡುವ ಸೇವೆ ಇದೆ. ನಂತರ ಕೇವಲ ಪ್ರಜೆಗಳನ್ನು ಮಾಡುವ ಸೇವೆ ಇರುವುದು. ಆದರೆ ಸ್ವಲ್ಪ ಸಮಯದಲ್ಲಿ ಇಷ್ಟು ಪ್ರಜೆಗಳನ್ನು ಮಾಡಲು ವರದಾತ ಮೂರ್ತಿ ಆಗಲು ಯಾವ ಮುಖ್ಯ ಎಚ್ಚರ ಇಟ್ಟುಕೊಳ್ಳುತ್ತೀರಿ? ವರದಾತಾ ಮೂರ್ತಿಯಾಗಿ ಸ್ವಲ್ಪ ಸಮಯದಲ್ಲಿ ಅನೇಕರಿಗೆ ವರದಾನ ಕೊಡಲು ಸಾಧ್ಯವಾಗಬೇಕು, ಅದಕ್ಕಾಗಿ

ಏನು ಮಾಡಬೇಕು? ವರದಾತಾ ಆಗಲು ಮುಖ್ಯ ಪುರುಷಾರ್ಥ ಯಾವುದೆಂದರೆ, ಭಕ್ತಿಯಲ್ಲಿ ಯಾವ ಗಾಯನ ಬಾರಿ ಬಾರಿಗೂ ಮಾಡುತ್ತಿದ್ದಿರಿ, ಅರ್ಪಣೆ ಆಗುತ್ತೇನೆ, ಅದನ್ನು ಈಗ ಪ್ರಾಕ್ಟಿಕಲನಲ್ಲಿ ಮಾಡಿದರೆ, ಯಾರ ಮೇಲೆ ನೀವು ಅರ್ಪಣೆ ಆಗುತ್ತೀರೋ ಅವರು ನಿಮ್ಮನ್ನು ವರದಾತಾ ಮೂರ್ತಿಯನ್ನಾಗಿ ಮಾಡಿ ಬಿಡುತ್ತಾರೆ. ಆದ್ದರಿಂದ ಎಲ್ಲಾ ಸಮಯದಲ್ಲಿ, ಪ್ರತಿ ಕರ್ಮದಲ್ಲಿ, ಪ್ರತಿ ಸಂಕಲ್ಪದಲ್ಲಿ ಅರ್ಪಣೆ ಆಗುತ್ತೇನೆ ಎಂದು ಯಾವ ವಚನ ನೀಡಿದ್ದೆ. ಅದರ ಪಾಲನೆ ಮಾಡುತ್ತಿದ್ದೇನೆಯೇ ಎಂದು ವಿಚಾರ ಮಾಡಿರಿ, ತಂದೆ ವರದಾತಾ ಮೂರ್ತಿ ಆಗಿದ್ದಾರಲ್ಲವೆ. ನೀವೂ ಸಹ ತಂದೆಯ ಸಮಾನ ವರದಾತಾ ಮೂರ್ತಿ ಆಗುತ್ತೀರಿ. ಇಷ್ಟು ಪರಿಶೀಲನೆ ಮಾಡುತ್ತೀರಾ? ಒಂದು ಸಂಕಲ್ಪವೂ ಅನ್ಯ ಯಾರ ಪ್ರತಿ ಇರಬಾರದು, ಯಾವ ಸಂಕಲ್ಪಗಳು ಬರುತ್ತವೆ ಅವು ತಂದೆಯ ಪ್ರತಿ ಸಮರ್ಪಣೆಯ, ಅರ್ಪಣೆಯಾಗುವ ರಹಸ್ಯದಿಂದ ತುಂಬಿರಬೇಕು. ಈ ರೀತಿ ಪರಿಶೀಲನೆ ಮಾಡುತ್ತಿರಿ ಆಗ ಮಾಯೆಗೆ ಎದುರಿಸುವ ಸಾಹಸ ಮಾಡಲು ಸಾಧ್ಯವೇ? ಎದುರಿಸುವ ಸಾಹಸ ಮಾಡುವುದಿಲ್ಲ. ಆದರೆ ಬಾರಿ ಬಾರಿಗೂ ನಮಸ್ಕಾರ ಮಾಡಿ ಬೀಳ್ಕೊಡುಗೆ ತೆಗೆದುಕೊಳ್ಳುತ್ತದೆ. ತಿಳಿಯಿತೆ?

ಈ ರೀತಿ ಆಗಲು ಇಷ್ಟು ಪರಿಶೀಲನೆ ಮಾಡಿಕೊಳ್ಳಬೇಕು. ಮತ್ತು ಇನ್ನೊಂದು ಮಾತು - ವರದಾನಿ ಮೂರ್ತಿ ಆಗಲು ಸರ್ವ ಶಕ್ತಿಗಳ ಸಂಗ್ರಹ ಬೇರೆಯವರಿಗೂ ಕೊಡುವಷ್ಟು ನನ್ನಲ್ಲಿ ಆಗಿದೆಯೇ ಎಂದು ನಿಮ್ಮನ್ನು ನೀವು ನೋಡಿಕೊಳ್ಳಬೇಕು. ಜಮಾ ಮಾಡಿಕೊಂಡಿರದಿದ್ದರೆ ಬೇರೆಯವರಿಗೆ ಹೇಗೆ ಕೊಡಲು ಸಾಧ್ಯ! ವರದಾನಿ ಮೂರ್ತಿ ಆಗಲು ಬೇರೆಯವರಿಗೂ ಕೊಡುವಷ್ಟು ಸರ್ವ ಶಕ್ತಿಗಳನ್ನು ನಿಮ್ಮಲ್ಲಿ ಜಮಾ ಮಾಡಿಕೊಳ್ಳಬೇಕು. ಇಷ್ಟು ಜಮಾದ ಖಾತೆ ಇದೆಯೇ? ಅಥವಾ ಸಂಪಾದನೆ ಮಾಡಿ ಮತ್ತು ತಿಂದೂ ಆಯಿತೆ? ಯಾವ ಪರಿಣಾಮ ಇದೆ? ಒಂದಾಗಿದೆ ಸಂಪಾದನೆ ಮಾಡುವುದು ಮತ್ತು ತಿನ್ನುವುದು ಎರಡನೆಯದು ಜಮಾ ಮಾಡುವುದು ಮತ್ತು ಮೂರನೇಯದು ಸ್ವಯಂ ತನಗೂ ಆಗದಷ್ಟು ಕಡಿಮೆ ಸಂಪಾದನೆಯಿರುತ್ತದೆ. ಇನ್ನೊಂದಾಗಿದೆ ಬೇರೆಯವರ ಸಹಾಯ ಪಡೆದು ನಡೆಸಬೇಕಾಗುತ್ತದೆ. ಈಗ ಮೂರನೆ ಮತ್ತು ಎರಡನೇಯ ಸ್ಥಿತಿಯಿಂದ ಪಾರು ಆಗಿರುವಿರಾ? ಅವರು ಸಂಪಾದನೆ ಮಾಡಿದರು ಮತ್ತು ತಿಂದರು. ಜಮಾ ಮಾಡುವುದು ಮೊದಲಿನ ಸ್ಟೇಜ್, ಪ್ರತಿ ನಿತ್ಯ ನಿಮ್ಮ ಬ್ಯಾಂಕಿನ ಜಮಾ ಖಾತೆಯನ್ನು ನೋಡಿಕೊಳ್ಳುತ್ತೀರಾ? ಬಹಳ ಭಿಕ್ಷುಕರು ಭಿಕ್ಷೆ ಬೇಡಲು ಬರುತ್ತಾರೆ. ಆದ್ದರಿಂದ ಎಲ್ಲರಿಗೂ ಕೊಡಲು ಸಾಧ್ಯವಾಗುವಷ್ಟು ಜಮಾ ಮಾಡಿಕೊಳ್ಳಬೇಕು. ಜಮಾ ಮಾಡುವುದನ್ನು ಕಲಿತುಕೊಂಡಿದ್ದೀರಾ? ಎಷ್ಟು ಜಮಾ ಮಾಡಿಕೊಂಡಿರುವಿರಿ, ಖಾತೆಯಿಂದ ಗೊತ್ತಾಗುತ್ತದೆಯಲ್ಲವೆ. ನಿಮ್ಮ ಖಾತೆಯನ್ನು ನೋಡಿಕೊಂಡಿರುವಿರಾ? ಕೆಲವರು ತೆಗೆದು ತಿನ್ನುತ್ತಾರೆ ಗೊತ್ತಾಗುವುದೇ ಇಲ್ಲ. ನಂತರ ಅಚಾನಕಾಗಿ ಖಾತೆಯನ್ನು ನೋಡಿದಾಗ ವಿಚಾರ ಮಾಡಿತ್ತಾರೆ. ಇದೇನಾಯಿತು! ಇಂತಹವರು ಇಲ್ಲಿ ಇರುವುದೇ ಇಲ್ಲ. ಒಳ್ಳೆಯದು.

ಜಮಾದ ಖಾತೆ ಹೊಂದಿರುವವರ ವಿಶೇಷ ಗುಣ ಅಥವಾ ಕರ್ತವ್ಯ ಏನಾಗಿರುತ್ತದೆ? ಯಾರ ಬಳಿ ಖಜಾನೆ ಜಮಾ ಆಗಿರುತ್ತದೆಯೋ ಅವರ ಮುಖದಲ್ಲಿ ಒಂದು ವರ್ತಮಾನ ಮತ್ತು ಭವಿಷ್ಯ ಅರ್ಥಾತ್ ಈಶ್ವರೀಯ ನಶೆ ಮತ್ತು ನಾರಾಯಣಿ ನಶೆ ಕಂಡು ಬರುತ್ತದೆ ಮತ್ತು ನಯನ ಮತ್ತು ಮಸ್ತಕದಿಂದ ತಮ್ಮ ನಶೆ ಸರ್ವಾತ್ಮರಿಗೆ ಸ್ಪಷ್ಟವಾಗಿ ಕಾಣಿಸುತ್ತದೆ. ಇದು ಜಮಾ ಮಾಡುವವರ ಚಿಹ್ನೆಯಾಗಿದೆ. ಅವರ ಮುಖವೇ ಸೇವಾಧಾರಿಯಾಗಿರುತ್ತದೆ, ಮುಖವೇ ಸೇವೆ ಮಾಡುತ್ತದೆ. ಯಾರ ಬಳಿ ಹೆಚ್ಚು ಅಥವಾ ಕಡಿಮೆ ಜಮಾ ಆಗಿರುತ್ತದೆ ಅದೂ ಸಹ ಅವರ ಮುಖದಿಂದ ಕಂಡು ಬರುತ್ತದೆ. ಜಮಾ ಮಾಡಿರುವುದು ಅವರ ಮುಖ ಮತ್ತು ಮೂರ್ತಿಯಿಂದ ಗೊತ್ತಾಗುತ್ತದೆ. ಜಡಚಿತ್ರಗಳನ್ನು ಮಾಡುವಾಗಲೂ ಸಹ ಕೆಲವು ಚಿಹ್ನೆಗಳಿರುತ್ತವೆ ಆ ಜಡ ಚಿತ್ರಗಳಿಂದ ಸಹ ಅನುಭವ ಆಗುತ್ತದೆ. ಅದೇ ರೀತಿ ನಿಮ್ಮ ಈ ಮುಖ ಪ್ರತಿ ಸಂಕಲ್ಪ ಮತ್ತು ಪ್ರತಿ ಕರ್ಮವನ್ನು ಸ್ಪಷ್ಟ ಮಾಡುತ್ತದೆ. ನನ್ನ ಮುಖದಿಂದ ಅನ್ಯ ಆತ್ಮರಿಗೆ ನಶೆ ಮತ್ತು ಗುರಿಯ ಅನುಭವ ಆಗುತ್ತದೆಯೇ ಎಂದು ನಿಮ್ಮನ್ನು ನೀವು ಪರಿಶೀಲನೆ ಮಾಡಿಕೊಳ್ಳಿ. ಶ್ರೇಷ್ಠ ಕುಲದ ಮಗ ಈಗ ಬಡವನಾಗಿದ್ದರೂ ಅವನ ಮುಖ ತನ್ನ ಹೊಳಪು ಮತ್ತು ಕಾಂತಿಯಿಂದ ಇವನು ಉನ್ನತ ಕುಲದವನು ಎನ್ನುವುದನ್ನು ತೋರಿಸುತ್ತದೆ. ಅದೇ ರೀತಿ ಸದಾ ಖಜಾನೆಯಿಂದ ಸಂಪನ್ನ ಆಗಿದ್ದರೆ ಅದನ್ನು ಅವರ ಮುಖದಿಂದ ಮುಚ್ಚಿಡಲು ಸಾಧ್ಯವಿಲ್ಲ. ನಿಮ್ಮ ಬಳಿ ದರ್ಪಣ ಇದೆಯೇ? ಸದಾ ಜೊತೆಯಲ್ಲಿ ಇಟ್ಟುಕೊಂಡಿರುತ್ತೀರಾ? ಎಲ್ಲಾ ಸಮಯದಲ್ಲಿ ದರ್ಪಣವನ್ನು ನೋಡಿಕೊಳ್ಳುತ್ತೀರಾ? ಕೆಲವರಿಗೆ ಬಾರಿ ಬಾರಿಗೂ ದರ್ಪಣವನ್ನು ನೋಡಿಕೊಳ್ಳುವ ಅವಶ್ಯಕತೆ ಸಹ ಇರುವುದಿಲ್ಲ. ಹಾಗಾದರೆ ನೀವು ಸೆಕೆಂಡ್ ಸೆಕೆಂಡ್ ನೋಡಿಕೊಳ್ಳುತ್ತೀರೋ

ಅಥವಾ ನೋಡಿಕೊಳ್ಳುವ ಅವಶ್ಯಕತೆ ಇರುವುದಿಲ್ಲವೋ? ನಿಮ್ಮ ಪರಿಶೀಲನೆಯ ಅಭ್ಯಾಸ ಸ್ವಾಭಾವಿಕ ಆಗುವವರೆಗೂ ಬಾರಿ ಬಾರಿಗೂ ಪರಿಶೀಲನೆ ಮಾಡಿಕೊಳ್ಳಬೇಕಾಗುತ್ತದೆ. ನಿಧಾನ ನಿಧಾನವಾಗಿ ಬಾರಿ ಬಾರಿಗೂ ನೋಡಿಕೊಳ್ಳುವ ಅವಶ್ಯಕತೆ ಬರುವುದಿಲ್ಲ. ಈ ರೀತಿ ಆಗುವಿರಿ. ಸದಾ ಶೃಂಗಾರಗೊಂಡಿರುವವರು ಆಗುವಿರಿ. ಎಲ್ಲಿಯವರೆಗೆ ಸದಾ ಶೃಂಗಾರ ಮಾಡಿಕೊಂಡಿರುವವರು ಆಗುವಿರೋ ಅಲ್ಲಿಯ ವರೆಗೆ ಬಾರಿ ಬಾರಿಗೂ ನೋಡಿಕೊಳ್ಳಬೇಕಾಗುತ್ತದೆ ಮತ್ತು ಮಾಡಿಕೊಳ್ಳಬೇಕಾಗುತ್ತದೆ. ಮಾಯೆ ಯಾವುದೇ ಪ್ರಕಾರದಿಂದ ಮತ್ತು ಯಾವುದೇ ರೀತಿಯಿಂದ ನನ್ನ ಶೃಂಗಾರವನ್ನು ಕೆಡಿಸಲು ಸಾಧ್ಯವಿಲ್ಲ ಎಂದು ನಾಲ್ಕಾರು ಬಾರಿ ಪರಿಶೀಲನೆ ಮಾಡಿಕೊಂಡ ಮೇಲೆ ಪುನಃ ನೋಡಿಕೊಳ್ಳುವ ಅವಶ್ಯಕತೆ ಇರುವುದಿಲ್ಲ. ನಂತರ ನಿಮ್ಮ ಸಾಕ್ಷಾತ್ಕಾರ ಬೇರೆಯವರ ಮೂಲಕ ಸಹ ನಿಮಗೆ ಆಗುತ್ತದೆ. ಬೇರೆಯವರು ಸ್ವಯಂ ವರ್ಣನೆ ಮಾಡುವರು ಮತ್ತು ಗುಣಗಾನ ಮಾಡುವರು. ಒಳ್ಳೆಯದು.

ಸರ್ವರೂ ವಿಜಯೀ ರತ್ನ ಆಗಿರುವಿರಿ ಅಲ್ಲವೆ. ವಿಜಯೀ ರತ್ನ ಆಗಿರುವಿರಿ ಆದರೆ ವಿಜಯದ ಮಾಲೆ ಎಷ್ಟು ನಿಮ್ಮ ಕೊರಳಲ್ಲಿ ಹಾಕಿ ಕೊಂಡಿದ್ದೀರಿ ಅದನ್ನೂ ನೋಡಿಕೊಳ್ಳಬೇಕು. ಈ ವಿಜಯದ ಮಾಲೆ ದಿನೇ ದಿನೇ ಹೆಚ್ಚಾಗುತ್ತವೆ. ಹೆಚ್ಚಾಗುತ್ತಿವೆಯೇ ಮತ್ತು ಎಲ್ಲಿಯವರೆಗೆ ಹೆಚ್ಚಿದೆ ಎನ್ನುವುದನ್ನೂ ಸಹ ನೋಡಿಕೊಳ್ಳಬೇಕು. ಮಾಲೆ ಉದ್ದ ಆದಾಗ ಏನು ಮಾಡುತ್ತಾರೆ? ಡಬಲ್ ಮಾಡಿ ಹಾಕಿಕೊಳ್ಳುತ್ತಾರೆ ಆಗ ಶೃಂಗಾರ ಇನ್ನೂ ಸುಂದರವಾಗುತ್ತದೆ. ಹಾಗಾದರೆ ಇಷ್ಟು ದೊಡ್ಡ ಮಾಲೆ ಹಾಕಿಕೊಳ್ಳುತ್ತಾರೆ. ಅದರಿಂದ ನಿಮ್ಮ ಕೊರಳಲ್ಲಿ ಹಾಕಿಕೊಂಡಿರುವಿರಾ? ಇಂದಿನ ದಿನ ನನ್ನ ವಿಜಯ ಮಾಲೆಯಲ್ಲಿ ಎಷ್ಟು ವಿಜಯೀ ರತ್ನಗಳು ಹೆಚ್ಚಾದವು ಎನ್ನುವುದನ್ನೂ ಸಹ ನೋಡಿಕೊಳ್ಳಿ. ಒಳ್ಳೆಯದು.

ದೃಷ್ಟಿಯಿಂದ ಸೃಷ್ಟಿ ಬದಲಾಗುತ್ತದೆ ಇದೂ ಸಹ ಈಗಿನ ಹೇಳಿಕೆ ಆಗಿದೆ. ಎಂತಹ ತಮೋಗುಣಿ ಅಥವಾ ರಜೋಗುಣಿ ಆತ್ಮರೇ ಬರಲಿ, ಆದರೆ ನೀವು ನಿಮ್ಮ ಸತೋಗುಣಿ ದೃಷ್ಟಿಯಿಂದ ಅವರ ಸೃಷ್ಟಿ, ಅವರ ಸ್ಥಿತಿ, ಅವರ ವೃತ್ತಿ ಬದಲಾಗಬೇಕು. ಮುಂದೆ ಹೋದಂತೆ ಇಂತಹ ಅನುಭವ ಅನೇಕ ಆತ್ಮರು ಮಾಡುವರು. ಮೂರೂ ಲೋಕದ ಸಾಕ್ಷಾತ್ಕಾರ ಮಾಡಿಸಿದರು ಎನ್ನುವ ಸ್ಮೃತಿಚಿಹ್ನೆ ಇದೆ. ಇದೂ ಸಹ ಈಗಿನ ಗಾಯನವಾಗಿದೆ. ನಿಮ್ಮ ಮುಂದೆ ಬರುವುದರಿಂದ ಅವರಿಗೆ ಮೂರೂ ಲೋಕವೇನು ನಿಮ್ಮ ದೃಷ್ಟಿಯ ಮೂಲಕ ಅವರಿಗೆ ತಮ್ಮ ಪೂರ್ಣ ಜೀವನ ಕಥೆ ಗೊತ್ತಾಗಬೇಕು. ಯಾವ ರೀತಿ ಪ್ರಾರಂಭದಲ್ಲಿ ಜ್ಞಾನದ ಸೇವೆ ಅಷ್ಟು ಇರಲಿಲ್ಲ ದೃಷ್ಟಿಯಿಂದಲೇ ಉದ್ಧಾರ ಮಾಡುತ್ತಿದ್ದರು. ಹಾಗೆಯೇ ಅಂತ್ಯದಲ್ಲಿಯ ಜ್ಞಾನದ ಸೇವೆ ಮಾಡುವ ಅವಕಾಶವಿರುವುದಿಲ್ಲ. ಆದಿಯಲ್ಲಿ ಏನು ನಡೆಯಿತು. ಅದೇ ಅಂತ್ಯದಲ್ಲಿಯೂ ನಿಮ್ಮ ಮೂಲಕ ನಡೆಯುತ್ತದೆ. ಯಾವ ರೀತಿ ವೃಕ್ಷದ ಬೀಜ ಮೊದಲು ಪ್ರತ್ಯಕ್ಷ ಆಗಿರುತ್ತದೆ, ಮಧ್ಯದಲ್ಲಿ ಆ ಬೀಜ ಅಡಗಿ ಹೋಗುತ್ತದೆ, ನಂತರ ಅಂತ್ಯದಲ್ಲಿ ಅದೇ ಬೀಜ ಪ್ರತ್ಯಕ್ಷ ರೂಪದಲ್ಲಿ ಕಾಣಿಸುತ್ತದೆ. ಅದೇ ರೀತಿ ನೀವು ಆದಿ ಆತ್ಮರಲ್ಲಿ ಮೊದಲು ತಳಪಾಯ ಹಾಕಲಾಗಿದೆ ಅದೇ ಸೇವೆ ಅಂತ್ಯದಲ್ಲಿಯೂ ಆಗಲಿದೆ. ಒಳ್ಳೆಯದು.

ಅವ್ಯಕ್ತ ಮುರಳಿ 20-05-1971.

***ವಿಧಾತ - ವರದಾತಾತನದ ಸ್ಥಿತಿ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ವಿಧಾತ ಮತ್ತು ವರದಾತ ಆಗಿದ್ದೇನೆ (ವಿಧಾತ - ಜ್ಞಾನವನ್ನು ಕೊಡುವುದು, ವರದಾತ- ವರದಾನವನ್ನು ಕೊಡುವುದು).

2. ನನ್ನ ಎದುರಿಗೆ ಸಾಹಸಹೀನವಾಗಿರುವ ಅಥವಾ ಯಾವುದಾದರೂ ಪ್ರಾಪ್ತಿಯನ್ನು ಹೊಂದುವ ಇಚ್ಛೆಯಿಂದ ಯಾರೇ ಬಂದರೂ, ನಾನು ಅವರಿಗೆ ಜ್ಞಾನದ ಜೊತೆಗೆ ವರದಾನವನ್ನು ಕೊಡುತ್ತಿದ್ದೇನೆ.

3. ನಾನು ಶಿವಶಕ್ತಿ ಸ್ವರೂಪ.

4. ನಾನು ವರದಾತನಾಗಿ ವರದಾನವನ್ನು ಕೊಡುವ ಸೇವೆಯನ್ನು ಮಾಡುತ್ತಿದ್ದೇನೆ.

5. ನನ್ನ ಪ್ರತಿ ಕರ್ಮ, ಪ್ರತಿ ಸಂಕಲ್ಪ ತಂದೆಗೆ ಅರ್ಪಣೆ ಮಾಡಿರುವ ಮಾಯಾಜೀತ್ ಸ್ವರೂಪ.

6. ನಾನು ಸರ್ವಶಕ್ತಿಗಳ ಸ್ಟಾಕ್ ಅನ್ನು ಇತರರಿಗೆ ಕೊಡುವಷ್ಟು ಜಮಾ ಮಾಡಿಕೊಂಡಿದ್ದೇನೆ.

7. ನನ್ನ ಮಸ್ತಕದಲ್ಲಿ ಮತ್ತು ನಯನಗಳಲ್ಲಿ ಈಶ್ವರೀಯ ನಶೆ, ನಾರಾಯಣ ನಶೆ ಕಾಣಿಸುತ್ತಿದೆ. (ಜಮಾ ಖಾತೆಗೆ ಗುರುತು).

8. ಪರಿಶೀಲಿಸಿಕೊಳ್ಳುವ ದರ್ಪಣವನ್ನು ನಾನು ಸದಾ ನನ್ನೊಂದಿಗೆ ಇಟ್ಟುಕೊಂಡಿದ್ದೇನೆ.

9. ನನ್ನ ದೃಷ್ಟಿಯಿಂದ ಸೃಷ್ಟಿ ತಯಾರಾಗುತ್ತಿದೆ.

10. ನನ್ನ ಸತೋಗುಣಿ ದೃಷ್ಟಿಯಿಂದ ಎಂತಹ ತಮೋಗುಣಿ ರಜೋಗುಣಿ ಆತ್ಮರ ವೃತ್ತಿಯೂ ಬದಲಾಗಿ ಮೂರು ಲೋಕಗಳ ಸಾಕ್ಷಾತ್ಕಾರ ಅವರಿಗೆ ಆಗುತ್ತಿದೆ ಮತ್ತು ಅವರ ಇಡೀ ಜೀವನ ಅರ್ಥವಾಗುತ್ತಿದೆ.

11. ಆದಿ ಆತ್ಮನಾದ ನನ್ನಿಂದ ವೃಕ್ಷಕ್ಕಿಂತ ಮೊದಲು ಬೀಜವು ಪ್ರತ್ಯಕ್ಷವಾಗುತ್ತಿದೆ (ಪರಮಾತ್ಮನ ಪ್ರತ್ಯಕ್ಷತೆ).